ಸದ್ಯದ ತೀವ್ರತೆಗೆ ಮುಖಮಾಡದಿರುವುದು
ಭ್ರಾಂತಿಯ ಮಡುವಲ್ಲಿ ಬೀಳುವುದು
ಅದು ನಿರಂತರವೇ ಸದ್ಯದಲಿ ಇದ್ದು ಸಾಗುವುದು
ಅಳಿಯಲು
ಅಳಿದು ಉಳಿಯಲು
ಸೃಷ್ಟಿಯಲಿಹುದೆ ಅಳಿದು ಹೋಗುವುದು

ಆದರೂ
ಆಡಿದುದು ಕೇಳಿದುದು
ಕ್ಷಣದ ಹಿಂದಿನ ಮಿಡಿತದಂತೆ
ಮುಂಗಾರನು ಕರೆತಂದ ಹಕ್ಕಿಯ ಕೂಗಿನಂತೆ

ಇರುವಂತೆ ಇರುತ್ತಿದ್ದಿದ್ದರೆ
ಆಗುತ್ತಿರಲಿಲ್ಲ ಆಗಬಾರದದು ಈಗೆಲ್ಲ
ಇರುವಂತೆ ಇರದಿರುವುದಕ್ಕೆ ತಂತ್ರ
ಜಲದಲ್ಲಿ ಘನ ಪ್ರತಿಮೆ ಘನದಂತೆ

ಇರುವಿನ ಅರಿವೇ ಇಲ್ಲವೇ

ಹೊಸ ಪಾತ್ರ, ಹೊಸ ಪಾತಳಿ, ಭಿನ್ನ ನುಡಿಗಟ್ಟು – ಬಹುತ್ವದ ಸೊಗಡು ಚೆಲುವನ್ನು ಹಿಡಿದಿಡುವ ಹಂಬಲದ ‘ಕಾವ್ಯ ಜೂಟಾಟ’ದ ಮೂರನೇ ಹಂತವಿದು. ಆರಿಫ್ ರಾಜಾ, ಕಾವ್ಯಾ ಕಡಮೆ ಅವರಿಂದ ಕಾವ್ಯದ ಪರಾಗಗಳನ್ನು ಪಡೆದಿರುವ ಕವಿ ಎಚ್.ಆರ್. ರಮೇಶ್ ‘ಜೂಟಾಟ’ವನ್ನು ಹೊಸ ಮಜಲಿಗೆ ಒಯ್ದಿದ್ದಾರೆ. ಇದು, ಆಟ ಸಂಕೀರ್ಣವಾಗುತ್ತಿರುವ ಹಾಗೂ ಕುತೂಹಲಕರ ಆಯಾಮ ಪಡೆದುಕೊಳ್ಳುತ್ತಿರುವ ಸಮಯ.

